# ಪುರಸಭಾ ಕಾರ್ಯಾಲಯ, ಮದ್ದೂರು

ನಂ.: ಪುಕಾಮ/ ಎಡಿ/ 15/2008 -09 **ಸಾರ್ವಜನಿಕ ಪ್ರಕಟಣೆ** ದಿನಾಂಕ: 25-07-2008

1. ಈ ಮೂಲಕ ಪುರಜನರಿಗೆ ತಿಳಿಯಪಡಿಸುವುದು ಏನೆಂದರೆ ಲೋಡ್ ಶೆಡ್ಡಿಂಗ್ ಇರುವುದರಿಂದ ನೀರು ಸರಬರಾಜು ವ್ಯವಸ್ಥೆಯಲ್ಲಿ ತೊಂದರೆಯಾಗಿದೆ. ಸಾರ್ವಜನಿಕರು ಸಹಕರಿಸಬೇಕಾಗಿದೆ.
2. ಪಟ್ಟಣದಲ್ಲಿ ರಸ್ತೆ ಕೆಲಸ ನಡೆಯುತ್ತಿರುವುದರಿಂದ ರಸ್ತೆಯ ಕೆಲಸಕ್ಕೆ ಮುಂಚಿತವಾಗಿ ಒಳಚರಂಡಿ ಮತ್ತು ನೀರು ಸಂಪರ್ಕವನ್ನು ನಿಗದಿತ ಶುಲ್ಕವನ್ನು ಪಾವತಿಸಿ ಪಡೆದುಕೊಳ್ಳುವುದು.
3. ಒಳಚರಂಡಿ ಸಂಪರ್ಕವನ್ನು ತಮ್ಮ ಮನೆಯ ಗೇಟಿನವರೆಗೆ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳುವುದು ಸಂಸ್ಕರಣ ಘಟಕ ಪೂರ್ಣಗೊಂಡ ನಂತರ ಕನೆಕ್ಷನ್ ಕೊಡಬಹುದಾಗಿದೆ.
4. ಡಾಂಬರ್ ಆದ ನಂತರ ರಸ್ತೆ ಕಟಿಂಗ್ ಮಾಡಲು ಅವಕಾಶವಿರುವುದಿಲ್ಲ. ದುಬಾರಿ ದಂಡ ಕಟ್ಟಬೇಕಾಗುತ್ತದೆ.
5. ಸಕಾಲದಲ್ಲಿ ನೀರಿನ ತೆರಿಗೆ ಹಾಗೂ ಮನೆ ಕಂದಾಯ ಪಾವತಿಸಬೇಕು ತಪ್ಪಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.
6. ನೀರನ್ನು ಮಿತವಾಗಿ ಬಳಸಿ, ನಲ್ಲಿಯನ್ನು 15 ದಿನದೊಳಗೆ ಹಾಕಿಕೊಳ್ಳದಿದ್ದಲ್ಲಿ ನಲ್ಲಿ ಸಂಪರ್ಕವನ್ನು ಕಡಿತಗೊಳಿಸಲಾಗುವುದು.
7. ತಮ್ಮ ಮನೆಗಳ ಕಸವನ್ನು ರಸ್ತೆ, ಚರಂಡಿ ಅಥವಾ ಎಲ್ಲೆಂದರಲ್ಲಿಗೆ ಬಿಸಾಕದೆ ತೊಟ್ಟಿಯಲ್ಲಿಯೇ ಹಾಕಿ ಪಟ್ಟಣದ ಆರೋಗ್ಯ ಮತ್ತು ಸೌಂದರ್ಯ ಕಾಪಾಡುವುದು ತಪ್ಪಿದ್ದಲ್ಲಿ ದಂಡವನ್ನು ವಿಧಿಸಲಾಗುವುದು
8. ಮನೆ ಕಟ್ಟುವ ಸಂದರ್ಭ ಅಥವಾ ಇನ್ನಾವುದೇ ಸಂದರ್ಭದಲ್ಲಿ ಪುರಸಭೆಯ ರಸ್ತೆ, ನಿವೇಶನ, ಚರಂಡಿಯನ್ನು ಹಾನಿಗೊಳಿಸಿದರೆ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
9. ಕಡ್ಡಾಯವಾಗಿ ಉದ್ದಿಮೆ ಪರವಾನಿಗೆ ತೆಗೆದುಕೊಂಡು ಉದ್ದಿಮೆ ನಡೆಸುವುದು ಇಲ್ಲವಾದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.
10. ಜನನ, ಮರಣ ಮಾಹಿತಿ ಕಡ್ಡಾಯವಾಗಿ ನೊಂದಾಯಿಸುವುದು. ಜನನ ಮರಣ ಘಟನೆಯಾದ 21 ದಿನದೊಳಗೆ ನೊಂದಾಣಿ ಮಾಡಿಸುವುದು. 21 ದಿನದಿಂದ 1 ವರ್ಷದೊಳಗೆ ನೋಟರಿ ಅಫಿಡವಿಟ್ ಹಾಗೂ 1 ವರ್ಷದ ನಂತರ ಕೋರ್ಟ್ ಆದೇಶ ಮೇರೆಗೆ ನೊಂದಣಿ ಮಾಡಿಕೊಳ್ಳಲಾಗುವುದು. ತಿದ್ದುಪಡಿಗಳಿಗೆ **ಯಾವುದೇ** ಅವಕಾಶವಿರುವುದಿಲ್ಲ.
11. ಪುರಸಭೆ ವ್ಯಾಪ್ತಿಯಲ್ಲಿ ಜಾನುವಾರುಗಳಿಗೆ ಕಾಲುಬಾಯಿ ಜ್ವರದ ವಿರುದ್ಧ ಲಸಿಕೆಯನ್ನು ದಿನಾಂಕ: 31-12-2008 ರಂದು ಬೆಳಿಗ್ಗೆ 7 ಘಂಟೆಯಿಂದ ಪಶುಸಂಗೋಪನಾ ಇಲಾಖೆಯವರು ಪ್ರಾರಂಭಿಸುವುದರಿಂದ ತಮ್ಮ ಜಾನುವಾರುಗಳಿಗೆ ಲಸಿಕೆಯನ್ನು ತಪ್ಪದೆ ಹಾಕಿಸಿ.
12. ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ಪುರಸಭೆಯ ಪರವಾನಗಿಯನ್ನು ಪಡೆದು ಕಟ್ಟುವುದು ತಪ್ಪಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಶಿವಾನಂದ
ಪುರಸಭಾ ಅಧ್ಯಕ್ಷರು
ಪುರಸಭೆ, ಮದ್ದೂರು.

ಪಿ. ಜಯಮಾಲ ಕೆ.ಎಂ.ಎ.ಎಸ್.
ಮುಖ್ಯಾಧಿಕಾರಿ
ಪುರಸಭೆ, ಮದ್ದೂರು.

ಉನ್ನತಿ ಪೇಪರ್ ಅಂಡ್ ಪ್ರಿಂಟರ್ಸ್, ಮದ್ದೂರು, ಮೊ: 9242402734, 9964180180